# ಅಧ್ಯಾಯ–VI

# ಫಲಿತಾಂಶ ಮತ್ತು ಶಿಫಾರಸುಗಳು

## 6.1 ಫಲಿತಾಂಶ

ವಸತಿ ಬೇಡಿಕೆಯನ್ನು ನಿರ್ಣಯಿಸುವುದಕ್ಕೆ ಸಮೀಕ್ಷೆ ನಡೆಸಲು ಸೂಚಿಸಲಾದ ವಿಧಾನವನ್ನು ಯುಎಲ್‌ಬಿಗಳು ಅನುಸರಿಸಲಿಲ್ಲ. ಕೆಎಚ್‌ಪಿಯಲ್ಲಿ ಪ್ರಕ್ಷೇಪಿಸಲಾದ 20.35 ಲಕ್ಷ ವಸತಿರಹಿತ ಫಲಾನುಭವಿಗಳಿಗೆ ಪ್ರತಿಯಾಗಿ ಕೇವಲ 13.72 ಲಕ್ಷ ನಿರೀಕ್ಷಿತ ವಸತಿರಹಿತ ಫಲಾನುಭವಿಗಳನ್ನು ಗುರುತಿಸಿದ್ದರಿಂದ ಅಸಮರ್ಪಕ ಸಮೀಕ್ಷೆಯು ಅರ್ಹ ಫಲಾನುಭವಿಗಳನ್ನು ಹೊರಗಿಡುವ ಅಪಾಯವನ್ನು ಹೊಂದಿದೆ. ಬೇಡಿಕೆ ಸಮೀಕ್ಷೆಯನ್ನೂ ಸಹ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲಿಲ್ಲ ಏಕೆಂದರೆ 13.72 ಲಕ್ಷ ಫಲಾನುಭವಿಗಳಲ್ಲಿ 6.72 ಲಕ್ಷ ಫಲಾನುಭವಿಗಳನ್ನು ಬೇಡಿಕೆ ಸಮೀಕ್ಷೆಯ ನಂತರ ಗುರುತಿಸಲಾಯಿತು. ಹೀಗೆ ಬೇಡಿಕೆ ಸಮೀಕ್ಷೆಯು ನಿರಂತರ ಪ್ರಕ್ರಿಯೆಯಾಗಿ ಮಾರ್ಪಟ್ಟಿದ್ದು, ಇದು ಕಾರ್ಯತಂತ್ರದ ಯೋಜನೆ, ಗುರಿಗಳನ್ನು ನಿಗದಿಪಡಿಸುವುದು ಮತ್ತು ಯೋಜನೆಯ ಗುರಿಯನ್ನು ಸಾಧಿಸಲು ಸಂಪನ್ಮೂಲಗಳ ಹಂಚಿಕೆಯ ಮೇಲೆ ಪರಿಣಾಮ ಬೀರಿತ್ತು.

2472 ಯೋಜನೆಗಳ ಅಡಿಯಲ್ಲಿ ಅನುಮೋದಿಸಲಾದ 5.17 ಲಕ್ಷ ಫಲಾನುಭವಿಗಳ ಪೈಕಿ ಕೇವಲ 3.43 ಲಕ್ಷ ಫಲಾನುಭವಿಗಳನ್ನು ಆಧಾರ್ ಸಂಖ್ಯೆಯಂತಹ ವಿಶಿಷ್ಟ ಗುರುತನ್ನು ಬಳಸಿಕೊಂಡು ಸರಿಯಾದ ಮೌಲ್ಯೀಕರಣದ ನಂತರ ಲಗತ್ತಿಸಲಾಗಿದೆ. ಇದರ ಪರಿಣಾಮವಾಗಿ ಬಿಎಲ್‌ಸಿ ಘಟಕದ ಅಡಿಯಲ್ಲಿ ಜೋಡಣೆಯದ 206 ಫಲಾನುಭವಿಗಳು ಊರ್ಜಿತಗೊಳಿಸದೆ ಎಹೆಚ್‌ಪಿ ಘಟಕದ ಅಡಿಯಲ್ಲಿ ಪ್ರಯೋಜನಗಳನ್ನು ಪಡೆದರು. ಜೋಡಣೆ ಸಮಯದಲ್ಲಿ ಪತಿ/ಪತ್ನಿಯ ವಿವರಗಳನ್ನು ಮೌಲ್ಯೀಕರಿಸದಿರುವುದು 21 ಬಿಎಲ್‌ಸಿ ಫಲಾನುಭವಿಗಳ ಪತಿ/ಪತ್ನಿಯರು ಎಹೆಚ್‌ಪಿ ಘಟಕದ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುವುದಕ್ಕೆ ಕಾರಣವಾಯಿತು. ಅನುಮೋದಿತ ಡಿಪಿಆರ್ ಅಡಿಯಲ್ಲಿ ಫಲಾನುಭವಿಗಳನ್ನು ಮತ್ತು ಯೋಜನೆಯ ಪ್ರಯೋಜನಗಳನ್ನು ಸ್ವೀಕರಿಸಿದ ಪಟ್ಟಿಯೊಂದಿಗೆ ಹೋಲಿಸಿದರೆ ಅನುಮೋದಿತ ಡಿಪಿಆರ್‌ಗಳಲ್ಲಿನ ಕೇವಲ 12 ಪ್ರತಿಶತದಷ್ಟು ಮೂಲ ಫಲಾನುಭವಿಗಳಿಗೆ ಯೋಜನೆಯಡಿಯಲ್ಲಿ ಪ್ರಯೋಜನಗಳನ್ನು ಒದಗಿಸಲಾಗಿದೆ ಮತ್ತು 44 ಪ್ರತಿಶತದಷ್ಟು ಜನರು ಬೇಡಿಕೆ ಸಮೀಕ್ಷೆಯ ಮೂಲಕ ಪಡೆದ ನಿರೀಕ್ಷಿತ ಫಲಾನುಭವಿಗಳ ಪಟ್ಟಿಯ ಭಾಗವಾಗಿಲ್ಲ ಎಂದು ತಿಳಿದುಬಂದಿದೆ. ನಿಗದಿತ ಕಾರ್ಯವಿಧಾನವನ್ನು ಕಡೆಗಣಿಸುವುದರ ಮೂಲಕ ಅಂತಹ ಫಲಾನುಭವಿಗಳ ಆಯ್ಕೆಯು ಅನರ್ಹ ಫಲಾನುಭವಿಗಳಾದ ಮೂರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವವರು, ಪಕ್ಕಾ ಮನೆಗಳನ್ನು ಹೊಂದಿರುವವರು ಇತ್ಯಾದಿಗಳಿಗೆ ಯೋಜನೆಯ ಪ್ರಯೋಜನಗಳನ್ನು ವಿಸ್ತರಿಸಲು ಕಾರಣವಾಯಿತು. ಜಂಟಿ ಪರಿಶೀಲನಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಪಿಎಂಎವೈ (ಯು) ಅಡಿಯಲ್ಲಿ ನಿರ್ಮಿಸಲಾದ ಶೇಕಡಾ 41 ರಷ್ಟು ಮನೆಗಳು 30 ಚದರ

ಮೀಟರ್‌ಗಿಂತಲೂ ಹೆಚ್ಚು ಕಾರ್ಪೆಟ್ ವಿಸ್ತೀರ್ಣವನ್ನು ಹೊಂದಿರುವ ದುಬಾರಿ ಬಹುಮಹಡಿ ಕಟ್ಟಡಗಳು ಫಲಾನುಭವಿಗಳ ಆಯ್ಕೆಯಲ್ಲಿನ ಅಕ್ರಮಗಳನ್ನು ಒತ್ತಿಹೇಳುತ್ತವೆ..

ಕಾರ್ಯತಂತ್ರ ಯೋಜನಾ ದಾಖಲೆಯಾಗಿದ್ದ ಹೆಚ್‌ಎಫ್‌ಎಪಿಒಎಯನ್ನು ಯೋಜನೆಯ ಪ್ರಾರಂಭವಾದ 5 ವರ್ಷಗಳ ನಂತರ 2020 ರಲ್ಲಿ ಅಂತಿಮಗೊಳಿಸಲಾಯಿತು. ಕೈಗೆಟಕುವ ದರದ ವಸತಿ ಕ್ಷೇತ್ರದ ಬೆಳವಣಿಗೆಯನ್ನು ಸುಗಮಗೊಳಿಸುವಲ್ಲಿ ಆಡಳಿತಾತ್ಮಕ ಮತ್ತು ನಿಯಂತ್ರಕ ಅಡಚಣೆಗಳನ್ನು ನಿವಾರಿಸಲು ಸೂಚಿಸಲಾದ ಕಡ್ಡಾಯ ಸುಧಾರಣೆಗಳನ್ನು ರಾಜ್ಯ ಸರ್ಕಾರವು ಇನ್ನೂ ಸಂಪೂರ್ಣವಾಗಿ ಅನುಸರಿಸಬೇಕಾಗಿದೆ (ಸೆಪ್ಟೆಂಬರ್ 2021).

ಎಹೆಚ್‌ಪಿ ಯೋಜನೆಗಳಲ್ಲಿ, ನಿಗದಿತ ಷರತ್ತುಗಳನ್ನು ಪೂರೈಸದ ಕಾರಣ ಭಾರತ ಸರ್ಕಾರವು ₹1003.55 ಕೋಟಿ ಮೊತ್ತವನ್ನು ತಡೆಹಿಡಿಯಿತು ಮತ್ತು ₹8360.78 ಕೋಟಿ ಮೊತ್ತದ ಫಲಾನುಭವಿ ವಂತಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ಕಡಿಮೆ ಸಂಗ್ರಹಣೆಯಿಂದಾಗಿ ಆರ್ಥಿಕ ಸಂಪನ್ಮೂಲಗಳನ್ನು ಒಟ್ಟುಗೂಡಿಸುವಲ್ಲಿ ಕೊರತೆಯುಂಟಾಯಿತು. ಎಎಚ್‌ಪಿ ಘಟಕದಡಿಯಲ್ಲಿ ಮೂಲಸೌಕರ್ಯ ಸೌಲಭ್ಯಗಳೊಂದಿಗೆ ಗುಂಪು ವಸತಿ ಒದಗಿಸುವ ಯೋಜನೆಯ ಉದ್ದೇಶವು ಈಡೇರಲಿಲ್ಲ ಏಕೆಂದರೆ ಕೆಎಸ್‌ಡಿಬಿ ತೆಗೆದುಕೊಂಡ ಮನೆಗಳಲ್ಲಿ ಕೇವಲ ಶೇಕಡಾ 14ರಷ್ಟು ಮನೆಗಳು ಮಾತ್ರ ಗುಂಪು ವಸತಿಗಳಾಗಿದ್ದವು ಮತ್ತು ಉಳಿದ ಮನೆಗಳನ್ನು ಚದುರಿದ ರೀತಿಯಲ್ಲಿ ಪ್ರತ್ಯೇಕವಾಗಿ ನಿರ್ಮಿಸಲಾಗಿತ್ತು. ಇದರಿಂದ ಗುತ್ತಿಗೆದಾರರು ಟೆಂಡರ್ ಒಪ್ಪಂದದಂತೆ ಕಾಮಗಾರಿ ಕೈಗೊಳ್ಳುವ ಬದಲು ಸ್ವಂತ ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಣ ಮತ್ತು ಸಾಮಗ್ರಿಗಳ ಬಿಡುಗಡೆ ಮಾಡುವ ಮೂಲಕ ಅಕ್ರಮ ಮಾಡಲು ಅನುಕೂಲವಾಯಿತು. ಎಹೆಚ್‌ಪಿ ಯೋಜನೆಗಳನ್ನು ನಾಗರಿಕ ಮೂಲಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆಗಳು, ವಿದ್ಯುತ್, ಇತ್ಯಾದಿಗಳನ್ನು ಒದಗಿಸದೆ ಕೈಗೆತ್ತಿಕೊಳ್ಳಲಾಗಿತ್ತು.

ಯೋಜನೆಗಳಿಗೆ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿನ ಕೊರತೆಯಿಂದಾಗಿ ಭಾರತ ಸರ್ಕಾರವು ಬಿಎಲ್‌ಸಿ ಯೋಜನೆಯಡಿಯಲ್ಲಿ ₹569.56 ಕೋಟಿ ಮೊತ್ತದ ಮೊದಲ ಕಂತಿನ ಬಿಡುಗಡೆಯನ್ನು ತಡೆಹಿಡಿದಿತ್ತು. ನಿರ್ಮಾಣದಲ್ಲಿ ನಿಗದಿತ ಪ್ರಗತಿಯನ್ನು ಸಾಧಿಸಿದ್ದರೂ ಬಿಎಲ್‌ಸಿ ಫಲಾನುಭವಿಗಳಿಗೆ ಪಾವತಿ ಬಿಡುಗಡೆಯಲ್ಲಿ ವಿಳಂಬವಾದ ಪರಿಣಾಮ ಕಾಮಗಾರಿಗಳು ಸ್ಥಗಿತಗೊಂಡಿದ್ದು, ನಿರ್ಮಾಣಕ್ಕಾಗಿ ಹಣ ಬಿಡುಗಡೆಯ ನಿರೀಕ್ಷೆಯಲ್ಲಿ ತಮ್ಮ ಅಸ್ತಿತ್ವದಲ್ಲಿದ್ದ ಮನೆಗಳನ್ನು ನೆಲಸಮ ಮಾಡಿದ ಫಲಾನುಭವಿಗಳಿಗೆ ತೊಂದರೆಯಾಗಿತ್ತು. ಮೊದಲನೇ ಮತ್ತು ಎರಡನೇ ಕಂತುಗಳಾಗಿ ₹87.16 ಕೋಟಿ ಮೊತ್ತದ ಆರ್ಥಿಕ ನೆರವನ್ನು ಪಡೆದಿದ್ದ ಬಿಎಲ್‌ಸಿ ಫಲಾನುಭವಿಗಳು ಉಳಿದ ಕಂತುಗಳನ್ನು ಎರಡರಿಂದ ನಾಲ್ಕು ವರ್ಷಗಳು ಕಳೆದರೂ ಇನ್ನೂ (ಮಾರ್ಚ್ 2021) ಕ್ಲೈಮ್ ಮಾಡಿರಲಿಲ್ಲವಾದ್ದರಿಂದ ಮನೆಗಳು ಅಪೂರ್ಣವಾಗಿ ಉಳಿದು ಅವುಗಳ ಮೇಲಿನ ವೆಚ್ಚವು ಫಲಪ್ರದವಾಗಲಿಲ್ಲ. ವಿಶಿಷ್ಟ ಗುರುತಿನ ಸಂಖ್ಯೆ ಮೂಲಕ ನಿಗದಿತ ದೃಢೀಕರಣವನ್ನು ಮಾಡದೇ 62,648 ಬಿಎಲ್‌ಸಿ ಫಲಾನುಭವಿಗಳಲ್ಲಿ 12,757 ಫಲಾನುಭವಿಗಳಿಗೆ ₹172.64 ಕೋಟಿ ಮೊತ್ತದ ಪಾವತಿಗಳನ್ನು ಮಾಡಿದ್ದರ ಪರಿಣಾಮವಾಗಿ ನಕಲು ಪಾವತಿಗಳಾಗಿದ್ದವು. 111

ಪ್ರಕರಣಗಳಲ್ಲಿ ಬಹು ಫಲಾನುಭವಿ ಕೋಡ್‌ಗಳನ್ನು ರಚಿಸಲಾಗಿತ್ತು ಮತ್ತು ಅಂತಹ ಫಲಾನುಭವಿಗಳಿಗೆ ₹1.30 ಕೋಟಿ ಮೊತ್ತದ ಎರಡು ಪಾವತಿಗಳನ್ನು ಮಾಡಲಾಗಿತ್ತು.

ಸಿಎಲ್‌ಎಸ್‌ಎಸ್ ಘಟಕದಡಿಯಲ್ಲಿ ಮಾಡಿದ ಪಾವತಿಗಳ ಭೌತಿಕ ಮೇಲ್ವಿಚಾರಣೆಯಲ್ಲಿನ ಲೋಪಗಳ ಪರಿಣಾಮವಾಗಿ ಸಿಎಲ್‌ಎಸ್‌ಎಸ್ ಅಡಿಯಲ್ಲಿ ನೆರವನ್ನು ಪಡೆದಿದ್ದ 471 ಫಲಾನುಭವಿಗಳು ಬಿಎಲ್‌ಸಿ ಮತ್ತು ಎಹೆಚ್‌ಪಿ ಘಟಕಗಳಡಿಲ್ಲಿಯೂ ಸಹ ನೆರವನ್ನು ಪಡೆಯುವಲ್ಲಿ ಪರಿಣಮಿಸಿತು. ಬಿಎಲ್‌ಸಿ ಫಲಾನುಭವಿಗಳ ಜಿಯೋ-ಟ್ಯಾಗಿಂಗ್ ಅನ್ನು ನಿಗದಿಪಡಸಿದ್ದ ಭುವನ್ ಅಪ್ಲಿಕೇಶನ್ ಮೂಲಕ ಕೈಗೊಳ್ಳದಿದ್ದುದು ₹0.97 ಕೋಟಿ ವೆಚ್ಚದಲ್ಲಿ ಪ್ರಕ್ರಿಯೆಯ ಅನಗತ್ಯ ನಕಲು ಮಾಡುವುದರಲ್ಲಿ ಪರಿಣಮಿಸಿತು. ಕೆಎಸ್‌ಡಿಬಿಯಿಂದ ಕೈಗೆತ್ತಿಕೊಂಡ ಎಹೆಚ್‌ಪಿ ಯೋಜನೆಗಳ ಜಿಯೋ-ಟ್ಯಾಗಿಂಗ್ ಅನ್ನು ನಿಗದಿಪಡಿಸಿದ್ದ ಭಾರತ್ ಅಪ್ಲಿಕೇಶನ್ನ ಬದಲಿಗೆ ತಾಂತ್ರಿಕ ವಿಶೇಷಣಗಳನ್ನು ಪೂರೈಸಲು ವಿಫಲವಾಗಿದ್ದ ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್ ಮೂಲಕ ಕೈಗೊಳ್ಳಲಾಯಿತು. ಸಾಮಾಜಿಕ ಲೆಕ್ಕ ಪರಿಶೋಧನೆ/ಮೌಲ್ಯಮಾಪನ ಅಧ್ಯಯನಗಳ ಅನುಪಸ್ಥಿತಿಯ ಜೊತೆಗೆ ಟಿಪಿಕ್ಯೂಎಮ್‌ಎ ಮತ್ತು ಸಿಎಲ್‌ಟಿಸಿಯ ಕಾರ್ಯನಿರ್ವಹಣೆಯಲ್ಲಿನ ನ್ಯೂನತೆಗಳು ಯೋಜನೆಯ ಮೇಲ್ವಿಚಾರಣೆಯನ್ನು ನಿಷ್ಪರಿಣಾಮಕಾರಿಯನ್ನಾಗಿಸಿತು.

ಮಾರ್ಚ್ 2021ರಲ್ಲಿದ್ದಂತೆ, ಬೇಡಿಕೆ ಸಮೀಕ್ಷೆಯ ಮೂಲಕ ಗುರುತಿಸಲಾದ 13,71,592 ನಿರೀಕ್ಷಿತ ಫಲಾನುಭವಿಗಳಲ್ಲಿ 5,17,531 ಫಲಾನುಭವಿಗಳಿಗೆ (ಶೇಕಡಾ 38) ಮಾತ್ರ ಯೋಜನೆಗಳನ್ನು ಕೈಗೆತ್ತಕೊಳ್ಳಲಾಗಿತ್ತು. ಮಾರ್ಚ್ 2021ರಲ್ಲಿದ್ದಂತೆ ಅನುಮೋದಿತ 5,17,531 ವಸತಿ ಘಟಕಗಳಿಗೆ ಪ್ರತಿಯಾಗಿ 88,395 ವಸತಿ ಘಟಕಗಳನ್ನು (ಶೇಕಡಾ 17) ಮಾತ್ರ ಪೂರ್ಣಗೊಳಿಸಲಾಗಿತ್ತು. 3,28,499 ವಸತಿ ಘಟಕಗಳ (63 ಶೇಕಡಾ) ನಿರ್ಮಾಣವು ಇನ್ನೂ (ಮಾರ್ಚ್ 2021) ಪ್ರಾರಂಭವಾಗಬೇಕಿದ್ದು, ಇದು 2022ರ ವೇಳೆಗೆ 'ಎಲ್ಲರಿಗೂ ವಸತಿ' ಎನ್ನುವ ಯೋಜನೆಯ ಗುರಿಯನ್ನು ಸಾಧಿಸುವುದು ಕಷ್ಟವೆಂಬುದನ್ನು ಸೂಚಿಸುತ್ತಿತ್ತು.

## 6.2 ಶಿಫಾರಸುಗಳು

**ರಾಜ್ಯ ಸರ್ಕಾರ**

- **ರಾಜ್ಯದಲ್ಲಿ ವಸತಿ ಬೇಡಿಕೆಯನ್ನು ದೃಢಪಡಿಸಿಕೊಳ್ಳಲು ರಾಜ್ಯ ಸರ್ಕಾರವು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಗುರಿಯಾದ 2022ರೊಳಗೆ ಮನೆಗಳನ್ನು ಪೂರ್ಣಗೊಳಿಸಲು ಗುರಿಗಳನ್ನು ನಿಗದಿಪಡಿಸುವತ್ತ ಗಮನಹರಿಸಬೇಕು.**
- **ಯೋಜನೆಯ ಗುರಿಗಳನ್ನು ಸಾಧಿಸಲು ಗುರಿಗಳನ್ನು ಮತ್ತು ಸಂಪನ್ಮೂಲಗಳನ್ನು ನಿಗದಿಪಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿವಿಧ ಅನುಷ್ಠಾನ ಸಂಸ್ಥೆಗಳು ನಿಗದಿತ ಕಾಲಮಿತಿಯೊಳಗೆ ಕಾರ್ಯತಂತ್ರದ ಯೋಜನೆ ಮತ್ತು ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು.**

- ಕೇಂದ್ರದ ನೆರವಿನ ಬಿಡುಗಡೆಗೆ ಸೂಚಿಸಲಾದ ಷರತ್ತುಗಳಿಗೆ ರಾಜ್ಯ ಸರ್ಕಾರವು ಬದ್ಧವಾಗಿರಬೇಕು ಮತ್ತು ಯೋಜನೆಯಡಿಯಲ್ಲಿ ಯೋಜನೆಗಳನ್ನು ಅನುಮೋದಿಸುವ ಮೊದಲು ಫಲಾನುಭವಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ವಂತಿಗೆಯ ಬಗ್ಗೆ ಒಪ್ಪಿಗೆಯನ್ನು ಪಡೆಯಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಕೈಗೆಟಕುವ ದರದ ವಸತಿ ವಲಯದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಉತ್ತೇಜಿಸಲು ಸೂಚಿಸಲಾದ ಕಡ್ಡಾಯ ಸುಧಾರಣಾ ಷರತ್ತುಗಳನ್ನು ರಾಜ್ಯ ಸರ್ಕಾರವು ಪೂರ್ಣಗೊಳಿಸಬೇಕು.
- ಎಹೆಚ್‌ಪಿ ಘಟಕದಡಿಯಲ್ಲಿ ಅನುಮೋದಿಸಲಾದ ಯೋಜನೆಗಳು ಯೋಜನಾ ಮಾರ್ಗಸೂಚಿಗಳ ಅಡಿಯಲ್ಲಿ ರೂಪಿಸಲಾದ ಗುಂಪು ವಸತಿ ಪರಿಕಲ್ಪನೆಗೆ ಅನುಗುಣವಾಗಿರುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ನೋಡಲ್ ಮತ್ತು ಅನುಷ್ಠಾನ ಏಜೆನ್ಸಿಗಳು

- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಯೋಜನೆಗಳಿಗೆ ಎಲ್ಲಾ ಅನುಮೋದಿತ ಫಲಾನುಭವಿಗಳನ್ನು ಲಗತ್ತಿಸಲು ತುರ್ತು ಕ್ರಮ ಕೈಗೊಳ್ಳಬೇಕು ಮತ್ತು ಲಗತ್ತಿಸುವ ಪ್ರಕ್ರಿಯೆ ಪೂರ್ಣಗೊಂಡ ನಂತರವೇ ಯೋಜನೆಯಡಿಯ ಪ್ರಯೋಜನಗಳನ್ನು ಫಲಾನುಭವಿಗಳಿಗೆ ಒದಗಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
- ವೆಚ್ಚದ ಹೆಚ್ಚಳವನ್ನು ತಪ್ಪಿಸಲು ಮತ್ತು ಫಲಾನುಭವಿಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಅನುಷ್ಠಾನ ಸಂಸ್ಥೆಗಳು ಅನುಮೋದಿತ ಯೋಜನೆಗಳು ಪ್ರಾರಂಭವಾಗುವಲ್ಲಿನ ವಿಳಂಬಗಳನ್ನು ತಪ್ಪಿಸಬೇಕು.
- ಫಲಾನುಭವಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸಲು ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ನಿರ್ಮಾಣದ ಪ್ರಗತಿಗೆ ಅನುಗುಣವಾಗಿ ಬಿಎಲ್‌ಸಿ ಫಲಾನುಭವಿಗಳಿಗೆ ಪಾವತಿಗಳನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು.
- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಡಿಬಿಟಿ ಅಡಿಯಲ್ಲಿ ನಕಲು ಪಾವತಿಗಳ ಜವಾಬ್ದಾರಿಯನ್ನು ನಿಗದಿಪಡಿಸಬೇಕು ಮತ್ತು ಭವಿಷ್ಯದಲ್ಲಿ ಅಂತಹ ನಿದರ್ಶನಗಳನ್ನು ತಪ್ಪಿಸಲು ಬಹು ಫಲಾನುಭವಿ ಕೋಡ್‌ಗಳನ್ನು ಉತ್ಪಾದಿಸುವುದನ್ನು ತಪ್ಪಿಸಲು ನಿಯಂತ್ರಣ ಕಾರ್ಯವಿಧಾನವು ಜಾರಿಯಲ್ಲಿದೆ ಎಂದು ಖಚಿತಪಡಿಸಿಕೊಳ್ಳಬೇಕು.
- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಫಲಾನುಭವಿಗಳು ನಕಲು ಮಾಡುವ ಸಾಧ್ಯತೆಗಳನ್ನು ತಡೆಗಟ್ಟಲು ಸಿಎಲ್‌ಎಸ್‌ಎಸ್ ಫಲಾನುಭವಿಗಳ ಪಟ್ಟಿಯ ನಿಗದಿತ ಪರಿಶೀಲನೆಯನ್ನು ನಡೆಸಬೇಕು.
- ಎಸ್‌ಎಲ್‌ಎನ್‌ಎ ಮತ್ತು ಕೆಎಸ್‌ಡಿಬಿಗಳು ಪೂರ್ಣಗೊಂಡಿರುವ ಎಲ್ಲಾ ಯೋಜನೆಗಳನ್ನು ಜಿಯೋ–ಟ್ಯಾಗ್ ಮಾಡಲು ಭಾರತ ಸರ್ಕಾರವು ಸೂಚಿಸಿದ ಪ್ರಮಾಣಿತ ಕಾರ್ಯವಿಧಾನಗಳನ್ನು ಅನುಸರಿಸಬೇಕು.

* ಮಾರ್ಗಸೂಚಿಯಲ್ಲಿ ಸೂಚಿಸಲಾದ ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ತೆಗೆದುಕೊಳ್ಳಬೇಕು ಮತ್ತು ಟಿಪಿಕ್ಯೂಎಮ್ಎ ಹಾಗೂ ಎಸ್ಎಲ್‌ಟಿಸಿಗಳ ಮೂಲಕ ಮೇಲ್ವಿಚಾರಣೆಯನ್ನು ಬಲಪಡಿಸಬೇಕು.

ಬೆಂಗಳೂರು (ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)
ದಿನಾಂಕ ಮಹಾಲೇಖಾಪಾಲರು (ಆಡಿಟ್–II)

ಮೇಲೆರುಜು ಮಾಡಲಾಗಿದೆ

ನವದೆಹಲಿ (ಗಿರೀಶ್ ಚಂದ್ರ ಮುರ್ಮು)
ದಿನಾಂಕ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು